ಈ) ಡಿಸೆಂಬರ್ 1991 ಅಂತ್ಯದವರೆಗೂ 21.86 ಲಕ್ಷ ರೂ.ಗಳು ಖರ್ಚಾಗಿರುತ್ತದೆ. ಹೆಚ್ಚುವರಿ ಕೆಲಸಗಳನ್ನು ಮೇ 1992 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆಶ್ರಯ ಯೋಜನೆಯಡಿಯಲ್ಲಿ ಹಂಚಿರುವ ನಿವೇಶನಗಳ ಸಂಖ್ಯೆ

236 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಿಂದ ರಾಜ್ಯದಲ್ಲಿ ನೀಡಲಾಗಿರುವ ನಿವೇಶನಗಳೆಷ್ಟು?

ಆ) ಇದಕ್ಕಾಗಿ ಇದುವರೆಗೆ ಖರ್ಚಾಗಿರುವ ಹಣವೆಷ್ಟು?

ಇ) ಹಾಗಿದ್ದಲ್ಲಿ ಯೋಜನೆಯನ್ನು ಮುಂದುವರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಜನವರಿ 92ರ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು 3,51,671 ನಿವೇಶನವನ್ನು ಆಶ್ರಯ ಯೋಜನೆಯಡಿ ಹಂಚಲಾಗಿದೆ.

ಆ) ಆಶ್ರಯ ಯೋಜನೆಯಲ್ಲಿ ಖರ್ಚಾದ ಒಟ್ಟು ಮೊತ್ತ ರೂ. 4,09,41,614-25.

ಇ) ಹೌದು.

ರಾಮನಗರ ಟೌನ್‌ನಲ್ಲಿ ಗೃಹ ಮಂಡಳಿ ಮನೆಗಳ ಹಂಚಿಕೆ.

260-ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಟೌನಿನಲ್ಲಿ ಬಿಜೂರು ಬಡಾವಣೆಯಲ್ಲಿ ಗೃಹ ಮಂಡಳಿಯವರು ಕಟ್ಟಿರುವ ಮನೆಗಳು ಸಾರ್ವಜನಿಕರಿಗೆ ಹಂಚಿಕೆಯಾಗಿದ್ದು ಅವರು ಹಣ ಕಟ್ಟದೆ ಉಳಿದಿರುವ ಮನೆಗಳೆಷ್ಟು?

ಆ) ಹಾಗಿದ್ದಲ್ಲಿ ಅಂತಹ ಮನೆಗಳನ್ನು ಬೇರೆಯವರಿಗೆ ವಿತರಣೆ ಮಾಡಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಇ) ಆವುಗಳಲ್ಲಿ ಕೆಲವು ಮನೆಗಳು ಶಿಥಿಲವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರಾಮನಗರ ಟೌನಿನ ಬಿಜೂರು ಬಡಾವಣೆಯಲ್ಲಿ ಗೃಹ ಮಂಡಳಿ ವತಿಯಿಂದ ಕಟ್ಟಿರುವ ಮನೆಗಳು ಸಾರ್ವಜನಿಕರಿಗೆ ದಿನಾಂಕ 16.1.88 ರಂದು ಹಂಚಿಕೆಯಾಗಿದ್ದು, ಅವುಗಳ ಪೈಕಿ ಹಂಚಿಕೆದಾರರು ಹಣ ಕಟ್ಟದೆ ಉಳಿದಿರುವ ಮನೆಗಳು ಯಾವುದೂ ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ನಗರ ಯೋಜನಾ ಇಲಾಖೆಯ 'ಸಿ' ಮತ್ತು ಆರ್ ನಿಯಮಗಳ ಪರಿಷ್ಕೃತ

261-ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರಂ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಯೋಜನಾ ಇಲಾಖೆಯ ಸಿ ಮತ್ತು ಆರ್ ಪರಿಷ್ಕೃತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?